## ಆಟದ ಮೂಲ ಸಿದ್ಧತೆಯೇ ಗೊತ್ತಿಲ್ಲದೇ ಓಟ

**–ಆನಂದ ಕಟ್ಟಿ**, ಕರ್ನಾಟಕದ ಮಾಜಿ ಕ್ರಿಕೆಟಿಗ



ಕ್ರಿಕೆಟ್‌ನಲ್ಲಿ ದೊಡ್ಡ ಸಾಧನೆಯ ಕನಸು ಹೊತ್ತ ಬಾಲಕನನ್ನು ನೀವೊಮ್ಮೆ ಪ್ರಶ್ನಿಸಿ; ನಿನ್ನ ಮೊದಲ ಆಸೆಯೇನು? ಎನ್ನುವ ಪ್ರಶ್ನೆಗೆ ಐಪಿಎಲ್ ಆಡಬೇಕು ಎನ್ನುವ ಸಿದ್ಧ ಉತ್ತರ ಬರುತ್ತದೆ. ಮೊದಲು ದೇಶ ಪ್ರತಿನಿಧಿಸಬೇಕು ಎನ್ನುವ ಮನಸ್ಥಿತಿಯಲ್ಲಿದ್ದ ಮಕ್ಕಳು ಈಗ ಚುಟುಕು ಕ್ರಿಕೆಟ್‌ನ ಆಕರ್ಷಣೆಗೆ ಒಳಗಾಗಿದ್ದಾರೆ.

ಐಪಿಎಲ್ ಸಾಕಷ್ಟು ಆಟಗಾರರಿಗೆ ಬದುಕು ರೂಪಿಸಿಕೊಟ್ಟಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಆಟಗಾರರ ಪಾಲಿಗೆ ಇದು ಆಕರ್ಷಣೆಯಾಗಿದೆ. ಬಿಳಿ ಪೋಷಾಕಿನ (ಟೆಸ್ಟ್ ಕ್ರಿಕೆಟ್) ಬಗ್ಗೆ ಯೋಚಿಸುವುದೇ ಇಲ್ಲ. ಐಪಿಎಲ್ ಪಂದ್ಯಗಳನ್ನು ನೋಡಿ ಬೌಂಡರಿ, ಸಿಕ್ಸರ್‌ಗಳನ್ನು ಹೊಡೆಯಬೇಕು, ಜನ ಮೆಚ್ಚಿಕೊಳ್ಳಬೇಕು. ಗ್ಯಾಲರಿ ಸಂಭ್ರಮಿಸಬೇಕು ಎನ್ನುವ ಆಕರ್ಷಣೆಯ ಕನಸು ಕಾಣುತ್ತಾರೆ. ಅದಕ್ಕೆ ತಕ್ಕಂತೆ ಸಿದ್ಧತೆ, ಅಭ್ಯಾಸ ಮತ್ತು ಕ್ರಿಕೆಟ್ ಮೂಲ ಕೌಶಲಗಳನ್ನು ಕಲಿಯುವುದಿಲ್ಲ. ಶಿಸ್ತುಬದ್ಧವಾಗಿ ಹಾಗೂ ವೃತ್ತಿಪರವಾಗಿ ಬೇಕಾದ ವಿದ್ಯೆಯನ್ನು ಕಲಿಯಬೇಕು ಎನ್ನುವ ತುಡಿತಕ್ಕಿಂತ ಆಕರ್ಷಕವಾಗಿ ಕಾಣಿಸಬೇಕು ಎನ್ನುವ ಮನೋಭಾವನೆಯ ಯುವಕರಲ್ಲಿ ಹೆಚ್ಚಾಗುತ್ತಿದೆ. ಅರೆಬರೆಯಾಗಿ ಕಲಿತ ಒಂದಷ್ಟು ವಿದ್ಯೆಯನ್ನು ಕಲಿತಷ್ಟೇ ವೇಗದಲ್ಲಿ ಮರೆತುಬಿಡುತ್ತಾರೆ.

ಐಪಿಎಲ್‌ನಿಂದ ಕಡಿಮೆ ಸಮಯದಲ್ಲಿ ಸ್ಟಾರ್ ಆಟಗಾರರಾಗಿ ಅಷ್ಟೇ ಬೇಗ ಸ್ಟಾರ್ ಪಟ್ಟ ಕಳೆದುಕೊಳ್ಳುತ್ತಿದ್ದಾರೆ. ನಾವು ಕ್ರಿಕೆಟ್ ಆಡುವಾಗಿನ 1990ರ ದಶಕದಲ್ಲಿ ದೇಶೀಯ ಟೂರ್ನಿಗಳಲ್ಲಿ ಆಡಬೇಕಿತ್ತು. ಪ್ರತಿಷ್ಠಿತ ಮಹಾರಾಜ ಕಪ್ ಪಂದ್ಯಗಳು ವಿಶ್ವಕಪ್ ಟೂರ್ನಿಯಷ್ಟೇ ಮಹತ್ವವಾಗಿದ್ದವು. ಮೊದಲು ಮೂರ್ನಾಲ್ಕು ತಾಸು ಐದಾರು ತಿಂಗಳು ಬೌಲಿಂಗ್ ಮಾಡಿದರೆ ಹೊಸ ಶೈಲಿ ಬೌಲಿಂಗ್ ಅಭ್ಯಾಸವಾಗುತ್ತಿತ್ತು.

ಕ್ರೀಡಾಪಟು ಆಗಬೇಕೆಂದು ಬಯಸುವ ಪ್ರತಿ ಮಗುವಿನಲ್ಲಿ ಕನಿಷ್ಠ ಒಂದು ಮೂಲ ಕ್ರೀಡಾಗುಣ ಅಥವಾ ಅದಕ್ಕೆ ತಕ್ಕಂತೆ ದೇಹವಾದರೂ ಇರಬೇಕು. ಏನೂ ಇಲ್ಲದೆ, ಅಭ್ಯಾಸವೂ ಇಲ್ಲದೆ ದೊಡ್ಡ ಸಾಧನೆಯ ಬೆನ್ನು ಹತ್ತಿದರೆ ನಿರಾಸೆಯೇ ಹೆಚ್ಚಾಗಿರುತ್ತದೆ.

ಇತ್ತೀಚೆಗೆ ಮುಗಿದ ಚಾಂಪಿಯನ್ಸ್ ಟ್ರೋಫಿಯಲ್ಲಿ ಭಾರತ ತಂಡ ಚಾಂಪಿಯನ್ ಆಗಿದ್ದನ್ನು ನೀವೆಲ್ಲರೂ ನೋಡಿದ್ದೀರಿ. ಟೂರ್ನಿಯುದ್ದಕ್ಕೂ ಉತ್ತಮ ಬ್ಯಾಟಿಂಗ್ ತೋರಿದ ವಿರಾಟ್ ಕೊಹ್ಲಿ, ಕೆ.ಎಲ್. ರಾಹುಲ್ ಹೀಗೆ ಅನೇಕ ಆಟಗಾರರು ಕ್ರಿಕೆಟ್‌ನ ಮೂಲ ಕೌಶಲಗಳನ್ನು ಚೆನ್ನಾಗಿ ಕಲಿತವರು. ಎಂಥದ್ದೇ ಸಂಕಷ್ಟದ ಸಂದರ್ಭದಲ್ಲಿದ್ದರೂ ತಂಡವನ್ನು ಗೆಲುವಿನ ದಡ ಸೇರಿಸಬಲ್ಲ ಶಕ್ತಿ ಹೊಂದಿದ್ದಾರೆ. ಈಗಿನ ಯುವ ಆಟಗಾರರು ಐಪಿಎಲ್ ಕೇವಲ ಆಕರ್ಷಣೆ ಎನ್ನುವ ಮನೋಭಾವನೆ ಬಿಟ್ಟು ಮೂಲ ತರಬೇತಿಗೆ ಒತ್ತು ಕೊಡುವ ಅಗತ್ಯವಿದೆ.

ವರ್ಷ 142 ದಿನಗಳಿಂದ ನಾಯಕತ್ವ ಅವಕಾಶ ಪಡೆದುಕೊಂಡರು. ಡೆಲ್ಲಿ ತಂಡದ ಅತ್ಯಂತ ಕಿರಿಯ ನಾಯಕ ಎನಿಸಿದರು. ನಾಯಕರಾಗಿ ಆಡಿದ ಮೊದಲ ಪಂದ್ಯದಲ್ಲಿಯೇ 40 ಎಸೆತಗಳಲ್ಲಿ 93 ರನ್‌ಗಳನ್ನು ಹೊಡೆದು ಸಾಮರ್ಥ್ಯ ಸಾಬೀತು ಮಾಡಿದರು. 2020ರಲ್ಲಿ ಇವರ ನಾಯಕತ್ವದಲ್ಲಿ ಡೆಲ್ಲಿ ತಂಡ ರನ್ನರ್ಸ್ ಅಪ್ ಆಯಿತು. ಗಾಯದ ಸಮಸ್ಯೆಯಿಂದ ಬಳಿಕ ಒಂದಷ್ಟು ತಿಂಗಳು ಕ್ರಿಕೆಟ್‌ನಿಂದ ದೂರ ಉಳಿದರು. 2022ರಲ್ಲಿ ಕೋಲ್ಕತ್ತದ ತಂಡ ₹12.25 ಕೋಟಿ ನೀಡಿ ಖರೀದಿಸಿ ಅಲ್ಲಿಯೂ ನಾಯಕನನ್ನಾಗಿ ಮಾಡಿತು. ಹಿಂದಿನ ಆವೃತ್ತಿಯಲ್ಲಿ ರೈಡರ್ಸ್ ಲೀಗ್ ಹಂತದ ಅಂಕಪಟ್ಟಿಯಲ್ಲಿ ಅಗ್ರಸ್ಥಾನ ಪಡೆದು ಫೈನಲ್‌ನಲ್ಲಿ ಚಾಂಪಿಯನ್ ಕೂಡ ಆಯಿತು. ಹೀಗಾಗಿ ಒಂದೇ ಋತುವಿನಲ್ಲಿ ಶ್ರೇಯಸ್ ಅಯ್ಯರ್ 'ಬೆಲೆ'ಯೂ ಏರಿತು. ಈ ಬಾರಿಯೂ ಕೆಕೆಆರ್ ತಂಡವನ್ನು ಅವರು ಮುನ್ನಡೆಸಲಿದ್ದಾರೆ.

### ವೆಂಕಟೇಶ್ ಅಯ್ಯರ್

ಈ ಸಲದ ಐಪಿಎಲ್ ಹರಾಜಿನಲ್ಲಿ ವೆಂಕಟೇಶ್ ಅಯ್ಯರ್ ಅವರನ್ನು ₹23.75 ಕೋಟಿ ನೀಡಿ ಕೋಲ್ಕತ್ತ ನೈಟ್ ರೈಡರ್ಸ್ ತಂಡ ಖರೀದಿಸಿದೆ. ಮೊದಲು ಅದೇ ತಂಡದಲ್ಲಿದ್ದ ವೆಂಕಟೇಶ್, ಕಳೆದ ಋತುಗಳಲ್ಲಿ ಆಲ್‌ರೌಂಡರ್ ಆಗಿ ಮಿಂಚಿದ್ದರು. ಈಚೆಗೆ ಅವರನ್ನು ಬಿಡುಗಡೆ ಮಾಡಿದ್ದ ಕೆಕೆಆರ್ ತಂಡವೇ ಮರಳಿ ಖರೀದಿಸಿರುವುದು ವಿಶೇಷ.

ಎರಡು ಟೆಸ್ಟ್, ಒಂಬತ್ತು ಏಕದಿನ, 20 ಪ್ರಥಮ ದರ್ಜೆ ಪಂದ್ಯಗಳಲ್ಲಿ ಆಡಿರುವ ಮಧ್ಯಪ್ರದೇಶದ ಇಂದೋರ್‌ನ ವೆಂಕಟೇಶ್ ಐಪಿಎಲ್‌ಗೆ ಪದಾರ್ಪಣೆ ಮಾಡಿದ್ದು 2021ರಲ್ಲಿ. ಒಟ್ಟು 51 ಪಂದ್ಯಗಳನ್ನಾಡಿದ್ದು, 1326 ರನ್ ಗಳಿಸಿದ್ದಾರೆ. ಇದಕ್ಕೂ ಮೊದಲು ದೇಶೀಯ ಟೂರ್ನಿಗಳಲ್ಲಿ




ವೆಂಕಟೇಶ ಅಯ್ಯರ್:
ನಿರ್ದಯಿ–ನಿರ್ಭಯ ಆಟಗಾರ